631 (1117) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಇಲಾಖೆಯು ಗುರುತಿಸಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಎಷ್ಟು ಕೈಗಾರಿಕೆಗಳು ಉತ್ಪಾದನೆಯಲ್ಲಿದೆ ಹಾಗೂ ಎಷ್ಟು ಕೈಗಾರಿಕೆಗಳು ಸ್ಥಗಿತಗೊಂಡಿವೆ.

ಇ) ಜಿಲ್ಲೆಯಲ್ಲಿ ಬಹುತೇಕ ಸಣ್ಣ ಕೈಗಾರಿಕೆಗಳು ಸ್ಥಗಿತವಾಗಿರಲು ಕಾರಣವೇನು;

ಈ) ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವವರಿಗೆ ಸರ್ಕಾರ ನೀಡಿರುವ ವಿನಾಯ್ತಿ ಮತ್ತು ರಿಯಾಯ್ತಿಗಳೇನು;

ಉ) ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಇಲಾಖೆಯಿಂದ ಬಿಡುಗಡೆ ಮಾಡಬೇಕಾಗಿರುವ ಸಬ್ಸಿಡಿಯ ಮೊತ್ತವೆಷ್ಟು;

ಊ) ಪ್ರಸಕ್ತ ಸಾಲಿನಲ್ಲಿ ಎಷ್ಟು ಹಣವನ್ನು ಇದಕ್ಕಾಗಿ ಬಿಡುಗಡೆ ಮಾಡಲಾಗುವುದು?

ಶ್ರೀ ಶಿವಾನಂದ ಎಸ್. ನಾಯಕ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಮೇ 2006ರ ಅಂತ್ಯದವರೆಗೆ 7455 ಘಟಕಗಳು ಇರುತ್ತವೆ.

ಆ) ಈ ಪೈಕಿ 1425 ಘಟಕಗಳು ಸ್ಥಗಿತಗೊಂಡಿವೆ. 6030 ಕೈಗಾರಿಕಾ ಘಟಕಗಳು ಕಾರ್ಯ ನಿರತವಾಗಿವೆ.

ಇ) ಮುಖ್ಯವಾದ ಕಾರಣಗಳು

* ದುಡಿಮೆ ಬಂಡವಾಳದ ಕೊರತೆ
* ತೀವ್ರತರದ ಪೈಪೋಟಿ
* ಮಾರುಕಟ್ಟೆ ಬೆಲೆಯ ಏರುಪೇರು

ಈ) 2001–06ರ ಸರ್ಕಾರಿ ಆದೇಶದನ್ವಯ ಕೈಗಾರಿಕಾ ನೀತಿಯಡಿ ಸಹಾಯಧನ, ಪ್ರವೇಶ ತೆರಿಗೆ ವಿನಾಯಿತಿ, ಸ್ಟಾಂಪ್ ಡ್ಯೂಟಿ ವಿನಾಯ್ತಿ, ಕೈಗಾರಿಕಾ ಉದ್ದೇಶಕ್ಕಾಗಿ ಬರುವ ಕೃಷಿ ಜಮೀನು ಬದಲಾವಣೆಗಾಗಿ ರಿಯಾಯ್ತಿ ಪತ್ರ.

ಉ) ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕಾದ ಸಬ್ಸಿಡಿಯ ಮೊತ್ತ ರೂ.4.97 ಕೋಟಿ.

ಊ) ಈಗ ಸದ್ಯ ರಾಜ್ಯದಲ್ಲಿ 2006–07ಕ್ಕೆ ರೂ.69 ಕೋಟಿ ಸಹಾಯಧನ ಬಿಡುಗಡೆಗೆ ಆದೇಶಿಸಲಾಗಿದೆ. ಇದರಲ್ಲಿ ಬೀದರ್ ಜಿಲ್ಲೆಗೆ ಅಂದಾಜು ರೂ.1.50 ಕೋಟಿ ಸಹಾಯಧನ ಬಿಡಗಡೆಯಾಗಬಹುದು.

634 (710) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಹಣಕಾಸು ಸಂಸ್ಥೆಯ ಅಧಿಕಾರಗಳು ತಮ್ಮ ಬಂಧು–ಬಳಗ ಮತ್ತು ಪತ್ನಿಯ ಹೆಸರಿನಲ್ಲಿ ಖಾಸಗಿ ಹಣಕಾಸು ಸಂಸ್ಥೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?